O.S.No.160/2015
PW -1

ದಿನಾಂಕ 01/08/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಆರ್.ಇ ಪ್ರತಿವಾದಿ ಪರ ವಕೀಲರಿಂದ**

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ, ದಾವಾ ಸ್ವತ್ತು 200 ಎಕರೆಗಿಂತ ಹೆಚ್ಚಿನ ಗೊಮಾಳ ಜಮೀನು ಎಂದರೆ ಸರಿ. ಸದರಿ ಆಸ್ತಿಯ ಸರ್ವೆ ನಂ-71 ಇರುತ್ತದೆ. ಸರ್ವೆ ನಂ-71 ರಲ್ಲಿ ಪೋಡು ಆಗಿರುವುದಿಲ್ಲ. ಸದರಿ ಆಸ್ತಿಗೆ ಪ್ರತ್ಯೇಕವಾಗಿ ಹದ್ದುಬಸ್ತು ಆಗಿರುವುದಿಲ್ಲ ಎಂದರೆ ಸಾಕ್ಷಿ ಆಗಿದೆ ಎಂದು ಉತ್ತರಿಸಿರುತ್ತಾರೆ. ದಾವೆ ಸಲ್ಲಿಸುವ ಕಾಲಕ್ಕೆ ಹದ್ದುಬಸ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಕೊಂಡುಕೊಳ್ಳುವ ಕಾಲಕ್ಕೆ ರಾಮಕೃಷ್ಣರಾವ್ ಇವರಿಗೆ ಸರ್ಕಾರದಿಂದ ಮಂಜೂರು ಆಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿಯವರ ಹೆಸರು ಪಹಣಿಯಲ್ಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಿಪಿ-1 ಕ್ರಯ ಪತ್ರವನ್ನು ನಾನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನಂಜಮ್ಮ ಇವರ ಪಿತ್ರಾರ್ಜಿತ ಸ್ವತ್ತು ಎಂದು ನಮೂದು ಇರುತ್ತದೆ ಎಂದರೆ ಸರಿ. ನಂಜಮ್ಮ ರವರ ತಂದೆ ಮತ್ತು ತಾತನ ಹೆಸರು ನನಗೆ ಗೊತ್ತಿರುವುದಿಲ್ಲ. ನಂಜಮ್ಮ ರವರಿಗೆ ಮಾರಾಟ ಮಾಡುವುದಕ್ಕೆ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

2. ನಿಪಿ-1 ರ ಚಕ್ಕುಬಂದಿಯ ದಕ್ಷಿಣ ದಿಕ್ಕಿಗೆ ಇದೇ ಸರ್ವೆ ನಂಬರ್ ಪೈಕಿ ನರಸಿಂಹಯ್ಯ ಅಂದರೆ ಪ್ರತಿವಾದಿಯ ತಂದೆಯ ಜಮೀನು ಎಂದು ನಮೂದು ಇರುತ್ತದೆ ಎಂದರೆ ಸರಿ. ಪೂ-ಕ್ಯಾತಯ್ಯ, ಹೀರಣ್ಣ , ನರಸಿಂಹಯ್ಯ ಇವರ ಜಮೀನು ಇರುತ್ತದೆ ಎಂದರೆ ಸರಿ. ಸದರಿಯವರ ಜಮೀನುಗಳಲ್ಲಿ ಮರ ಗಿಡಗಳು ಇರುತ್ತವೆ ಎಂದರೆ ಸರಿ. ಪ್ರತಿವಾದಿಗಳು ದಾವಾ ಆಸ್ತಿಯ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಒತ್ತುವರಿ ಮಾಡಿರುವುದಿಲ್ಲ ಮತ್ತು ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

3. ದಾವಾ ಸ್ವತ್ತಿಗೆ ಪ್ರತ್ಯೇಕ ಹದ್ದುಬಸ್ತು ಮತ್ತು ಪೋಡು ಆಗದೇ ಇರುವುದರಿಂದ ಮತ್ತು ನಂಜಮ್ಮ ಇವರಿಗೆ ಮಾರಾಟ ಮಾಡುವ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೋಡು ಆಗಿದೆ ಎಂದು ಉತ್ತರಿಸಿರುತ್ತಾರೆ. ರಾಮಕೃಷ್ಣರಾವ್ ರವರು ಎಂದಿಗೂ ಸ್ವಾಧೀನದಲ್ಲಿ ಇರಲಿಲ್ಲ ಮತ್ತು ಅವರಿಗೆ ಪ್ರತ್ಯೇಕವಾಗಿ ಪೋಡು ಆಗಿರುವುದಿಲ್ಲ ಎಂದರೆ ಸರಿಯಲ್ಲ. ರಾಮಕೃಷ್ಣರಾವ್ ರವರ ಹೆಂಡತಿ ಹೆಸರಿಗೆ ಖಾತೆ ಮತ್ತು ಪಹಣಿ ಆಗಿರುವುದಿಲ್ಲ ಎಂದರೆ ಸರಿಯುಲ್ಲ. ನಾನು ನಿಪಿ-1 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ-236/1 ರಲ್ಲಿ ಬಾವಿ ಇರುತ್ತದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ